ವಿವೇಚನೆಯಡಿ ಅಲ್ಲಮನಂಥವನನ್ನು ಪುರಸ್ಕರಿಸಿದ ನಿಮಿತ್ತವಲ್ಲದೆ, ಮಾದಾರ ಚನ್ನಯ್ಯನನ್ನು ತಂದೆ ಎಂದ ಕಾರಣಕ್ಕಾಗಿ ಅನುಭವಿಸಿದ ಯಾತನೆ ಯಾವ ಬಗೆಯದಿರಬಹುದು? ಈ ನಿಂದನೆಯ ಮಾತು ಮಂಟೇಸ್ವಾಮಿ ಜನಪದ ಮಹಾಕಾವ್ಯದಲ್ಲಿ ಮಾತ್ರ ಉಲ್ಲೇಖವಾಗುವಂಥದ್ದಲ್ಲ. ಅದು ಶಿವಗಣಪ್ರಸಾದಿ ಮಹಾದೇವಯ್ಯನು ಸಂಪಾದಿಸಿದ 'ಶೂನ್ಯಸಂಪಾದನೆ' ಕೃತಿಯಲ್ಲೂ ಪ್ರಕಟವಾಗುತ್ತದೆ. ಅಷ್ಟೇ ಅಲ್ಲ ಜನಪದ ಕಾವ್ಯ ಮಾದರಿಯ ಚಿತ್ರಣವೇ ಶೂನ್ಯಸಂಪಾದನೆಯಲ್ಲೂ ಕಾಣಿಸಿಕೊಳ್ಳುತ್ತದೆ. ಅಥವಾ ಶೂನ್ಯಸಂಪಾದನೆಯ ಪ್ರಸಂಗವೇ ಜನಪದರಲ್ಲೂ ಪುನರ್ನಿಮಿತವಾಗಿದೆ. ಆದರೆ, ಉತ್ತರ ಕರ್ನಾಟಕದ ಅಲ್ಲಮನ ವ್ಯೋಮ ವ್ಯಕ್ತಿತ್ವವು ತಳಸಮೂಹದ ನಡುವಣ ಜಗತ್ತಿನಲ್ಲಿ ರೂಪು ಪಡೆದು, ದಕ್ಷಿಣ ಕರ್ನಾಟಕದ ಜನಪದ ಕಥನಕ್ಕೆ ಪ್ರವೇಶ ಪಡೆದು ಲಕ್ಷಾಂತರ ಜನಸಮೂಹದ ಜ್ಯೋತಿ ರೂಪದ ಮೌಖಿಕ ಕಥನವಾಗಿ ಪ್ರಚಾರ ಪಡೆದುಕೊಂಡದ್ದೇ ಒಂದು ಪವಾಡ ಎನಿಸುತ್ತದೆ. ಇದೇನೇ ಇರಲಿ ಜೀರ್ಣಶೀರ್ಣ ವೇಷದವನನ್ನು ತಳಬೀದಿಯಿಂದ ಹೊತ್ತು ತಂದು ತಾನೇ ನಿರ್ಮಿಸಿದ ಲೋಕಾತೀತ ಶೂನ್ಯ ಸಿಂಹಾಸನದ ಮೇಲಿರಿಸಿದ ಪ್ರಸ್ತಾವ ಪ್ರಭುಲಿಂಗಲೀಲೆಯಲ್ಲಿ ನಾವು ಅರಿತಂತೆಯೇ ಬರುವುದಾದರೆ, ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯಲ್ಲಿ ಹೀಗೆ ಪ್ರಸ್ತಾಪವಾಗುತ್ತದೆ.

'ಇಂತು ಪ್ರಭುದೇವರು ಶೂನ್ಯ ಸಿಂಹಾಸನದ ಮೇಲೆ ಮೂರ್ತಿಗೊಂಡು ಕುಳ್ಳಿರ್ದ್ದಿರಲು, ಬಸವರಾಜ ದೇವರು ಪರಮಾನಂದಯುಕ್ತಮಾದ ಭಕ್ತಿಯಿಂದ ಪ್ರಭುದೇವರು ಪೂಜಿಸಿ ಆಡಿ, ಹಾಡಿ ಲೋಲಾಡುತ್ತಿರಲು, ಆರೋಗಣೆಗೆ ಬಂದು ಕುಳ್ಳಿರ್ದ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮವೆಲ್ಲವೂ ಕ್ರೋಧದಿಂದ ಬಸವರಾಜ ದೇವರ ಮೇಲೂ ಆ ಪ್ರಭುದೇವರ ಮೇಲೂ ಡಂಗುರವನಿಕ್ಕಿ ಎದ್ದು ಹೋದ ಪ್ರಸ್ತಾಪ:

ಆರಳುಗಂಗಳವರಿಗೆ ಹರಳುಗಂಗಳವರು ಸೈರಿಸದಂತೆ
ತುಱುಬುಳ್ಳವರಿಗೆ ಹಱಿಮಂಡೆಯವರು ಸೈರಿಸದಂತೆ
ಆರಸನ ಕಂಡು ಪುರುಷನ ಮಱೆದಂತೆ
ಮಾಡಿದನೀ ಬ್ರತಗೇಡಿ ಬಸವನು !
ಮಹೇಂದ್ರ ಜಾಲಿಕನವನೊಬ್ಬ ಪ್ರಭುವೆಂದು ಘಳಿಸಿಕೊಂಡು
ತನ್ನ ಪ್ರಾಣಲಿಂಗವೆಂದು ನಮ್ಮ ತಿರಿಗಿ ನೋಡಲೊಲ್ಲ
ಅವನಲ್ಲಿ ಏನು ಲೇಸ ಕಂಡನು, ನಮ್ಮಲ್ಲಿ ಏನು ಹೊಲ್ಲೆಹವ ಕಂಡನು
ಕಂಚನೊಲ್ಲದೆ ಬಿಟ್ಟು ಹಂಚ ಹಿಡಿದನು
ಅನಾಚಾರಿ ಅವನೊಬ್ಬ, ವ್ರತಗೇಡಿ ಬಸವನೊಬ್ಬ!
ಇವರಿಬ್ಬರೂ ದೇವಲೋಕ ಮರ್ತ್ಯಲೋಕಕ್ಕೆ ಹೊಱಗು
ಇವದಿರ ಮುಖವ ನೋಡಲಾಗದೆನುತ ಹೋದರು
ಕಲಿದೇವನ ಶರಣರೆಲ್ಲರೂ'

ಈ ವಚನ ಮಾತಿನ ಮುಂದಿನ ಪ್ರಸ್ತಾವವಾಗಿಯೇ ಮುಂದಿನ ಹೇಳಿಕೆಯಾಗಿ ಇಂತು ಜಂಗಮವೆಲ್ಲಾ ಖೇದದಿಂದ ಮುಳಿದುಹೋಗಲು ಬಸವರಾಜ ದೇವರು ಅತ್ಯಂತ ಭೀತರಾಗಿ ಪ್ರಭುದೇವರೊಡನೆ ಬಿನ್ನವಿಸುವುದೆಂದರೆ '... ಕೂಡಲಸಂಗಮ ದೇವಾ, ನಿಮ್ಮ ಶರಣರ ಮುನಿಸು ಎನಗೆ ಬಿಡಿಸಲಾರದ ತೊಡಕು' ಎಂಬ ಅಳಲಿನ ವ್ಯಥೆ!